# ಪ್ರಗತಿಶೀಲ ಕಾವ್ಯದ ಪರಾಮರ್ಶೆ

Dr. Y. A. DEVARUSHI
Assistant Professor
Kannada Dept,
C.B. College BHALKI,
Dist: BIDAR,Karnataka State.585328

**Abstract:**
*ಸಾವಿರದ ಒಂಬೈನೂರಾ ಮೂವತ್ತರ ದಶಕದಲ್ಲಿ ಬಂಡವಾಳ ಶಾಹಿಗಳ ದಬ್ಬಾಳಿಕೆಗಳಿಂದ ಯುರೋಪಿನ ಜನತೆ ಆಕ್ರೋಶಗೊಂಡಿತು. ಈ ಆಕ್ರೋಶ ಪ್ರತಿಭಟನೆಯ ರೂಪ ತಾಳಿ ಪ್ರಗತಿಶೀಲ ಚಳುವಳಿಯಾಗಿ ಮಾರ್ಪಾಡಾಯಿತು. ಅಂದು ವಿದೇಶದಲ್ಲಿ ಶಿಕ್ಷಣ ಪಡೆಯುತ್ತಿದ್ದ ಭಾರತೀಯ ಸಜ್ಜಾದ್ ಜಾಹೀರ್, ಮುಲ್ಕರಾಜ್ ಆನಂದ, ಡಾ. ಘೋಷ ಮೊದಲಾದವರು ಕೂಡಾ ಈ ಚಳುವಳಿಯಿಂದ ಪ್ರೇರಿತರಾಗಿ ಪ್ರಗತಿಶೀಲ ಲೇಖಕರ ಸಂಘವನ್ನು ಸ್ಥಾಪಿಸಿಕೊಂಡರು. ಭಾರತಕ್ಕೆ ಮರಳಿ ಬಂದ ಅವರು ಆ ಚಳುವಳಿಯನ್ನು ಇಲ್ಲಿಯೂ ಹರಡಿದರು.*

## 1. Introduction

ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಂಘ 1936ರಲ್ಲಿ ಸ್ಥಾಪನೆಗೊಂಡು ಅಖಿಲ ಭಾರತ ಮಟ್ಟದಲ್ಲಿ ಸಮ್ಮೇಳನಗಳನ್ನು ಹಮ್ಮಿಕೊಂಡಿತು. ಮುಂಬೈನಲ್ಲಿ ನಡೆದ 1943ರ ಸಮ್ಮೇಳನದಲ್ಲಿ ಕನ್ನಡ ಬರಹಗಾರರು ಭಾಗವಹಿಸಿ ಪ್ರಭಾವಕ್ಕೊಳಗಾದರು. ಹೀಗಾಗಿ ಅದೇ ವರ್ಷ ಕನ್ನಡ ಪ್ರಗತಿಶೀಲ ಲೇಖಕರ ಸಂಘವೂ ಸ್ಥಾಪಿತವಾಗಿ ಬೆಂಗಳೂರಿನಲ್ಲಿ ಸಮ್ಮೇಳನ ನಡೆಸಿತು.

ಧಾರವಾಡ–ಹುಬ್ಬಳ್ಳಿ, ವಿಜಾಪುರ, ಕಾರವಾರ, ದಕ್ಷಿಣ ಕನ್ನಡ, ಶಿವಮೊಗ್ಗ, ಭದ್ರಾವತಿ ಮೊದಲಾದ ಕಡೆಗಳಲ್ಲಿ ಪ್ರಗತಿಶೀಲ ಸಾಹಿತ್ಯ ಚಳುವಳಿ ತೀವ್ರಗೊಂಡಿತು. ಶ್ರೀರಂಗ, ನಿರಂಜನ, ನಾಡಿಗೇರ, ಕೃಷ್ಣರಾಯ, ಎ. ಪಿ. ಸೋಗಾಲ, ಶ್ರೀಕಂಠಪ್ಪ ಶೆಟ್ಟರ್, ಅ.ನ.ಕೃ, ಕುಮಾರ ವೆಂಕಣ್ಣ, ಶಿವರಾಮ ಕಾರಂತ ಮೊದಲಾದವರು ಇದರಲ್ಲಿ ಸಕ್ರೀಯವಾಗಿ ಪಾಲ್ಗೊಂಡರು. ವಿ. ಸೀತಾರಾಮಯ್ಯ, ಸು.ರಂ. ಯಕ್ಕುಂಡಿ, ಬಸವರಾಜ ಕಟ್ಟಿಮನಿ, ಬಿ. ಸಿ. ರಾಮಚಂದ್ರಶರ್ಮ, ಗಂಗಾಧರ ಚಿತ್ತಾಲ ಪಿ. ವಿ. ವಜ್ರಮಟ್ಟಿ ಮೊದಲಾದ ಲೇಖಕರು ಪ್ರಗತಿಶೀಲ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡರು.

ಫ್ರಾನ್ಸಿನ ಮೋಪಾಸ್, ಎಮಿಲಿ ಜೊಲಾ, ನಾರ್ವೆಯ ಇಬ್ಸನ್, ರಷ್ಯದ ಮ್ಯಾಕ್ಸಿನ್ ಗಾರ್ಕಿ, ದಾಸ್ತೊ ವಿಸ್ಕಿ ಮೊದಲಾದವರ ವಾದಗಳಿಂದ ಪ್ರಭಾವಿತಗೊಂಡ ಪ್ರಗತಿಶೀಲ ಬರಹಗಾರರು ಕನ್ನಡದಲ್ಲಿ ನವೋದಯದ ಪರಿಕಲ್ಪನೆಯನ್ನು ತಿರಸ್ಕರಿಸಿ ಮಾರ್ಕ್ಸ್‌ವಾದ ಹಿನ್ನೆಲೆಯ ಪ್ರಗತಿಶೀಲ ಸಾಹಿತ್ಯವನ್ನು ಪರಿಚಯಿಸಿದರು. ಪ್ರಗತಿಶೀಲರು "ಸಾಹಿತ್ಯ ಕೇವಲ ಕನಸಿನ ಮನೆಯಾಗದೆ ಸಾಮಾಜಿಕ ಬದಲಾವಣೆಗೆ ಹೆಣಗುವ ವಾಸ್ತವ ಜಗತ್ತಿನೊಂದಿಗೆ ಸಂಬಂಧ ಹೊಂದಿದ ಜವಾಬ್ದಾರಿಯುತ ಬರವಣಿಗೆ ಆಗಬೇಕೆಂದು ಬಯಸಿ, ಆ ದಿಶೆಯಲ್ಲಿ ಕಾರ್ಯಪ್ರವೃತ್ತರಾದರು. ಸಾಹಿತ್ಯ ಸುತ್ತಮುತ್ತಲಿನ ಪ್ರಪಂಚದಲ್ಲಿ ಜರಗುವ ಘಟನೆಗಳನ್ನು ಚಿತ್ರಿಸಬೇಕು. ಮಣ್ಣಿನ ಮಕ್ಕಳ ದುಃಖ ದುಮ್ಮಾನಗಳಿಗೆ ಸ್ಪಂದಿಸಬೇಕು. ಬಡತನ ಬವಣೆಯನ್ನು ನಿವಾರಿಸಲು ಯತ್ನಿಸಬೇಕು"[1] ಈ ಮೂಲ ಧ್ಯೇಯದೊಂದಿಗೆ ಕಾಣಿಸಿಕೊಂಡ ಪ್ರಗತಿಶೀಲ ಸಾಹಿತ್ಯದ ಗುರಿ ನಿಸ್ಸಂದೇಹವಾಗಿ ಮಾನವತಾವಾದದ ಪ್ರತಿಪಾದನೆ ಎಂದು ಹೇಳಬಹುದು.

"1938ರಲ್ಲಿ ಪ್ರಕಟಗೊಂಡ ದಕ್ಷಿಣ ಏಷಿಯಾ ಸಾಹಿತ್ಯದ ಮೇಲೆ ಮಾರ್ಕ್ಸ್ ವಾದದ ಪ್ರಭಾವ ಎಂಬ ಗ್ರಂಥ (ಸಂ–ಕೋಪ್ಲಾ ಕಾರ್ಲೆ) ಪ್ರಗತಿಶೀಲ ಸಾಹಿತ್ಯದ ಧ್ಯೇಯ–ಧೋರಣೆಗಳನ್ನು ಹೀಗೆ ಸ್ಪಷ್ಟಪಡಿಸಿದೆ."[2]

1. ಭಾರತದ ವಿವಿಧ ಪ್ರಾಂತಿಯ ಲೇಖಕರ ಸಂಘಗಳನ್ನು ಸ್ಥಾಪಿಸುವುದು, ಸಭೆ, ಸಮ್ಮೇಳನ, ವಿಚಾರ ಸಂಕಿರಣಗಳ ಮುಖಾಂತರ ವಿವಿಧ ಭಾಷೆಯ ಲೇಖಕರ ಸಂಘಗಳನ್ನು ಪರಸ್ಪರ ಸಮೀಪಕ್ಕೆ ತರುವುದು.
2. ಪ್ರಗತಿಪರ ವಿಚಾರಧಾರೆಯ ಮತ್ತು ಪ್ರಗತಿಶೀಲ ಲೇಖಕರ ಮುಖ್ಯೋದ್ದೋಷಕ್ಕೆ ವಿರುದ್ಧವಲ್ಲದ ಸಂಘ–ಸಂಸ್ಥೆಗಳನ್ನು ಒಗ್ಗೂಡಿಸುವುದು.
3. ಒಂದು ಭಾಷೆಯ ಪ್ರಗತಿಶೀಲ ಸಾಹಿತ್ಯವನ್ನು ಇನ್ನೊಂದು ಭಾಷೆಗೆ ತರ್ಜುಮೆ ಮಾಡುವುದು.
4. ಪ್ರಗತಿಶೀಲ ಲೇಖಕರ ಹಿತಾಸಕ್ತಿಗಳನ್ನು ಕಾಪಾಡುವುದು ಮತ್ತು ಅವರ ಕೃತಿಗಳ ಪ್ರಕಟಣೆಗೆ ಸಹಾಯ ಮಾಡುವುದು.
5. ಲೇಖಕರಿಗೆ ವಿಚಾರ ಸ್ವಾತಂತ್ರ್ಯವನ್ನು ದೊರಕಿಸುವುದು.

6. ಭಾರತೀಯ ಎಲ್ಲ ಭಾಷೆಗಳಿಗೆ ಸಮಾನ ಲಿಪಿಯನ್ನು ಬಳಸುವುದು ಆ ಸಾಮಾನ್ಯ ಲಿಪಿ ಇಂಡೋ-ರೋಮನ್ ಎಂದು ಕರೆಯಲಾಯಿತು.
7. ಸಾಮಾಜಿಕ, ಆರ್ಥಿಕ, ರಾಜಕೀಯ ಮುಂತಾದ ಪ್ರಗತಿಗೆ ಅಡ್ಡಗಾಲಾದ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ವಿರೋಧಿಸುವುದು.
8. ಊಳಿಗಮಾನ್ಯ ಪದ್ಧತಿಯನ್ನು ವಿರೋಧಿಸುವುದು, ಕಾರಣ ಅದು ಭಾರತೀಯ ಆರ್ಥಿಕ ಪ್ರಗತಿ ಮತ್ತು ವಿಮೋಚನೆಗೆ ಅಡ್ಡಿಯಾಗಿತ್ತು.
9. ಆಧುನಿಕ ವಿಚಾರಧಾರೆಗೆ ಅಡ್ಡಿಯನ್ನುಂಟು ಮಾಡುವಂಥ ಧಾರ್ಮಿಕ ಅಂಧ ಶ್ರದ್ಧೆಯನ್ನು ವಿರೋಧಿಸುವುದು.
10. ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯನ್ನು ವಿರೋಧಿಸುವುದು.
11. ಕೋಮುವಾದವನ್ನು ವಿರೋಧಿಸುವುದು.
12. ಕಾರ್ಮಿಕರ ಉದ್ಧಾರ ಮತ್ತು ವಿಮೋಚನೆಗೆ ಯತ್ನಿಸುವುದು.
13. ರೈತಾಪಿ ಜನರ ಉದ್ಧಾರ ಮತ್ತು ವಿಮೋಚನೆಗೆ ಶ್ರಮಿಸುವುದು.
14. ಒಟ್ಟಿನಲ್ಲಿ ಭಾರತೀಯ ವಿಚಾರಧಾರೆಯನ್ನು ಅದೃಷ್ಟವಾದ ಮತ್ತು ಮೂಢನಂಬಿಕೆಗಳಿಂದ ಬಿಡಿಸಿ ಅದು ಬುದ್ಧಿಶಕ್ತಿ ಮತ್ತು ತರ್ಕಗಳನ್ನು ಅನುಸರಿಸುವಂತೆ ಮಾಡುವುದು.

ಈ ಎಲ್ಲ ಅಂಶಗಳನ್ನು ಇಟ್ಟುಕೊಂಡು ಮಾನವತಾವಾದದ ಪ್ರತಿಪಾದನೆಗೆ ತೊಡಗಿದ ಪ್ರಗತಿಶೀಲ ಸಾಹಿತ್ಯ ಕೆಲವೆಡೆ ಒಮ್ಮುಖವಾಗಿ ಚಲಿಸಿದಂತೆ ಕಂಡುಬರುತ್ತದೆ. "ಪ್ರಗತಿಶೀಲ ಚಳುವಳಿಯ ಕಾವು ಸಾಹಿತ್ಯ ಕ್ಷೇತ್ರದ ಮಡಿವಂತಿಕೆಗಳನ್ನು ಕಿತ್ತೊಗೆಯುವ ಶಕ್ತಿ ಪಡೆದದ್ದುಂಟು. ಈ ಮಡಿವಂತಿಕೆಯು ಹಿಂದೆ ಮಧ್ಯಮವರ್ಗದ ಲೇಖಕರ ಆಶಯವೂ ಆಗಿತ್ತು. ಆ ವರ್ಗದಿಂದ ದೂರವಿಲ್ಲದ ಪ್ರಗತಿಶೀಲರ 'ಮಡಿವಂತಿಕೆ ವಿರೋಧಿ ಧೋರಣೆ' ಒಂದೇ ವರ್ಗದ ವೈರುಧ್ಯಗಳನ್ನು ತೋರಿಸಬಲ್ಲದು. ಸಾಂಪ್ರದಾಯಿಕ ಆಲೋಚನೆಯಲ್ಲಿ ನಂಬಿಕೆಯುಳ್ಳ ಒಂದು ಗುಂಪಿನ ವಿರೋಧಿ ಧ್ವನಿ ಅದೇ ವರ್ಗದ ಒಡಲಲ್ಲೇ ಬಂದಿರುವುದು ಸ್ವಾಭಾವಿಕ."[3]
ಇಂಥ ವಿಚಾರಗಳನ್ನು ಗಮನಿಸಿದಾಗ ಪ್ರಗತಿಶೀಲ ಸಾಹಿತ್ಯ ಕೆಲವೊಂದು ಇತಿ-ಮಿತಿಗಳನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ. ಯಾಕೆಂದರೆ ಭಿನ್ನ ವಿಚಾರಗಳನ್ನು ವಿಭಿನ್ನ ನಿಲುವುಗಳನ್ನು ಹೊಂದಿದ್ದ ಬರಹಗಾರರು ಇಲ್ಲಿದ್ದರು. ಸಾಮ್ಯವಾದ, ಸಮಾಜವಾದ ಮತ್ತು ಮಾನವತಾವಾದಗಳನ್ನು ಆದರ್ಶವಾಗಿ ಸ್ವೀಕರಿಸಿದ್ದರೂ ಕೂಡಾ ಸಾಮ್ಯವಾದವೇ ಹೆಚ್ಚಿನ ಪಾತ್ರವಹಿಸುತಿತ್ತು. ಇದಕ್ಕೆ ಕಾರಣ ಅದರಲ್ಲಿರುವ ಬಹುತೇಕ ಲೇಖಕರು ಸಾಮ್ಯವಾದದಿಂದ ಪ್ರಭಾವಿತರಾಗಿದ್ದರು ಅಥವಾ ಕಮ್ಯುನಿಷ್ಠ ಪಕ್ಷದ ಚಳುವಳಿಗಳಲ್ಲಿ ಸಕ್ರೀಯ ಚಳುವಳಿಗಾರರಾಗಿದ್ದರು. ಒಳಜಗಳಗಳು ಸಾಕಷ್ಟಿದ್ದವು. ಆದರೆ ಮೂಡಿ ಬಂದಿರುವ ಸಾಹಿತ್ಯದಲ್ಲಿ ಸಮಾಜಮುಖಿ ವಿಚಾರಗಳಿರುವುದರಿಂದ ಅದು ಜನಪದ ಸಾಹಿತ್ಯವಾಗಿಯೇ ಕಾಣಿಸಿಕೊಂಡಿರುವುದು ಗಮನಾರ್ಹ.

ಮಾನವತಾವಾದದ ಪ್ರತಿಪಾದನೆ ಅಥವಾ ಅದನ್ನು ಪ್ರಚೋದಿಸುವ ನಿಟ್ಟಿನಲ್ಲಿ ಪ್ರಗತಿಶೀಲ ಸಾಹಿತ್ಯ ಮುಂದುವರೆಯಿತು. ನವೋದಯ ಸಾಹಿತ್ಯದಲ್ಲಿ ಬರವಣಿಗೆ ಪ್ರಾರಂಭಿಸಿದ ಲೇಖಕರೆಲ್ಲರೂ ಹೆಚ್ಚು ಕಡಿಮೆ ಸರ್ಕಾರಿ ಹುದ್ದೆಯಲ್ಲಿದ್ದವರು. ಆದರೆ ಪ್ರಗತಿಶೀಲ ಸಾಹಿತ್ಯ ಬರಹಗಾರರಲ್ಲಿ ಹೆಚ್ಚಿನವರು ಚಳುವಳಿಗಳಲ್ಲಿದ್ದವರು. ಹೀಗಾಗಿ ನವೋದಯ ಸಾಹಿತ್ಯವನ್ನು ನಿರಾಕರಿಸಿ ಬೆಳೆದು ಬಂದ ಪ್ರಗತಿಶೀಲ ಸಾಹಿತ್ಯದ ಬಗ್ಗೆ ನವೋದಯದ ಪ್ರಮುಖ ಬರಹಗಾರರೆಲ್ಲರೂ ಒಂದಿಲ್ಲೊಂದು ರೀತಿಯಲ್ಲಿ ಪ್ರಗತಿಶೀಲತೆಯನ್ನು ಅಲ್ಲಗಳೆದಿದ್ದಾರೆ. ಜೊತೆಗೆ ಇದೇ ಕಾಲದಲ್ಲಿ ಪ್ರಚುರತೆಗೆ ಬರುತ್ತಿದ್ದ ನವ್ಯವಾದದ ಮಿಶ್ರಣವನ್ನು ಪ್ರಗತಿಶೀಲ ಬರಹಗಾರರು ತಮ್ಮದಾಗಿ ಮಾಡಿಕೊಂಡಾಗ ಪ್ರಗತಿಶೀಲ ಎನ್ನುವುದು ಬರಿ ಹೇಳುವುದಕ್ಕಷ್ಟೇ ಸೀಮಿತವಾದಂತಾಯಿತು. ಗೋಪಾಲಕೃಷ್ಣ ಅಡಿಗ, ಬಿ. ಸಿ. ರಾಮಚಂದ್ರ ಶರ್ಮಾ, ಗಂಗಾಧರ ಚಿತ್ತಾಲ, ಸು. ರಂ. ಯಕ್ಕುಂಡಿ ಮೊದಲಾದವರು ಪ್ರಗತಿಶೀಲ ಸಾಹಿತ್ಯದಲ್ಲಿ ಬೆಳೆದು ಆ ಮೇಲೆ ಅದನ್ನು ತೊರೆದು ನವ್ಯಸಾಹಿತಿಗಳಾಗಿ ನಿಂತದ್ದು ತಿಳಿದ ವಿಷಯವೇ ಆಗಿದೆ. ಜೊತೆಗೆ ಅ.ನ.ಕೃ ಮತ್ತು ನಿರಂಜನರ ಜಗಳಗಳು ಅತಿರೇಕಕ್ಕೆ ಹೋಗಿ ಸೃಜನಶೀಲ ಸಾಹಿತ್ಯದಲ್ಲಿ ಬಿರುಕನ್ನುಂಟು ಮಾಡಿತು.

ಇಷ್ಟೆಲ್ಲ ಅಡೆ-ತಡೆಗಳು ಬಂದೊದಗಿದರೂ ಕೂಡಾ ಪ್ರಗತಿಶೀಲ ಸಾಹಿತ್ಯವೆಂಬ ಘಟ್ಟ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನೆಲೆ ನಿಂತಿರುವುದನ್ನು ಮರೆಯುವಂತಿಲ್ಲ. ಕನ್ನಡ ಸಾಹಿತ್ಯದ ಇತರ ಘಟ್ಟಗಳಂತೆ ಪ್ರಗತಿಶೀಲ ಸಾಹಿತ್ಯವು ಒಂದು ಘಟ್ಟವಾಗಿ ಕಾಣಿಸಿಕೊಂಡಿರುವುದು ಮತ್ತು ತನ್ನ ಸಾಹಿತ್ಯದಲ್ಲಿ ಸಮಾಜಮುಖಿ ವಿಚಾರಗಳನ್ನು ಪ್ರತಿಪಾದಿಸಿರುವುದು ಅದರ ಗಟ್ಟಿತನಕ್ಕೆ ಸಾಕ್ಷಿ ಎನ್ನಬಹುದು.

ಪ್ರಗತಿಶೀಲ ಸಾಹಿತ್ಯದಲ್ಲಿ ಕಥೆ-ಕಾದಂಬರಿಗಳು ಬಂದಷ್ಟು ಕಾವ್ಯ ಮೂಡಿಬರಲಿಲ್ಲ. ಆದರೂ ಕಾವ್ಯ ಸೃಷ್ಟಿ ಕಡಿಮೆಯಿರಲಿಲ್ಲ. "ನವೋದಯದ ನಂತರ ಬರುವ ಪ್ರಗತಿಶೀಲ ಚಳುವಳಿಯು ಕನ್ನಡ ಕವಿಗಳ ಮೇಲೂ ತನ್ನ ಮುದ್ರೆಯನ್ನೊತ್ತದೆ ಇರಲಿಲ್ಲ. ಆದರೆ ಈ ಅಂದೋಲನ ಪ್ರಗತಿಶೀಲ ಕಾವ್ಯ ಎಂದು ಕರೆಯಬಹುದಾದಂತಹ ಒಂದು ಸ್ವತಂತ್ರ ಕಾಲವನ್ನು ನಿರ್ಮಿಸಲು ಸಮರ್ಥವಾಗಲಿಲ್ಲ. ಇದು ಒಂದು ಸ್ವತಂತ್ರ ಘಟ್ಟ ಎನ್ನುವುದಕ್ಕಿಂತ ನವೋದಯ ಕಾವ್ಯ ಹೊಸ ಹೊಸ ಅಂಶಗಳನ್ನು ಅಳವಡಿಸಿಕೊಂಡು ಪ್ರಗತಿಪರವಾಗಲು ಪ್ರಯತ್ನಿಸಿದ ಸಂಧಿಕಾಲ ಎನ್ನಬಹುದು. ಆದರೆ ಈ ಕಾಲದ ಕೆಲವು ತಾಕಲಾಟಗಳೊಳಗಿಂದ ಹಾಯ್ದು ಹೊರಬಂದ ಮನೋಧರ್ಮ ಮುಂದೆ ನವ್ಯಕಾವ್ಯ ನಿರ್ಮಾಣಕ್ಕೆ ಅಗತ್ಯವಾದ ಪೂರ್ವಸಿದ್ಧತೆಯನ್ನು ಇಲ್ಲಿಯೇ ರೂಪಿಸಿಕೊಂಡ ಹಾಗೆ ತೋರುತ್ತದೆ."[4]

ಇಂಥ ಹೇಳಿಕೆಗಳಿಂದ ಪ್ರಗತಿಶೀಲ ಕಾವ್ಯದ ನೆಲೆಗಳನ್ನು ಗುರುತಿಸುವ ವಿಮರ್ಶೆ ಕನ್ನಡ ಸಾಹಿತ್ಯದಲ್ಲಿ ಮೂಡಿಬರಲಿಲ್ಲ. ಈ ಅಂಶವನ್ನು ಗಮನಿಸಿದ ಅನೇಕ ಜನ ವಿದ್ವಾಂಸರು ಇದಕ್ಕೆ ಪ್ರಗತಿಶೀಲ ಬರಹಗಾರರ ಗದ್ಯ ಪ್ರೀತಿ ಕಾರಣವೆನ್ನುತ್ತಾರೆ. "ಪ್ರಗತಿಶೀಲ ಚಳವಳಿ ಕನ್ನಡ ಕಾವ್ಯದಲ್ಲಿ ನೆಲೆಯೂರಿ ನಿಲ್ಲುವುದಕ್ಕೆ ಬೇಕಾದ ತಾತ್ವಿಕ ಹಿನ್ನಲೆಯನ್ನು ಒದಗಿಸುವ ಪ್ರಯತ್ನ ಆ ಕಾಲದ ಸಮಕಾಲೀನ ವಿಮರ್ಶೆ ಮಾಡದೆ ಹೋಯಿತು. ವಸ್ತು ಪ್ರಾಧಾನ್ಯತೆ ಗದ್ಯ ಬರವಣಿಗೆಯಲ್ಲಿ ಕಾಣಿಸಿಕೊಂಡಂತೆ ಕಾವ್ಯಕ್ಷೇತ್ರದಲ್ಲಾಯಿತಾದರೂ, ವಿಮರ್ಶೆಯ ಪ್ರಮಾಣಗಳು ಕಾವ್ಯವನ್ನು ವ್ಯಕ್ತಿಗತವಾಗಿಯೇ ನೋಡಿದ್ದರಿಂದ, ಸಾಮಾಜಿಕ ಕಾಳಜಿಯುಳ್ಳ ಕವಿತೆಯನ್ನು ಎರಡನೆಯ ದರ್ಜೆಯ ಕವಿತೆಯೆಂದೋ, ಪ್ರಚಾರ ಕವಿತೆಯೆಂದೋ ನಿಂದಿಸಿ ಅಂತಹ ಕಾವ್ಯದ ಬೆಳವಣಿಗೆಯನ್ನು ಚಿವುಟಿಹಾಕಲು ಪ್ರಯತ್ನಿಸಿದವು.....ಇನ್ನೂ ನೆಲೆಯೂರದಿದ್ದ ಈ ಚಳುವಳಿಗೆ ನೆಲೆ ತಂದು ಕೊಡಬೇಕಾದ ಕೆಲಸವನ್ನು ಗದ್ಯಕ್ಷೇತ್ರದಲ್ಲಿ ಚಳವಳಿಯ ಯಶಸ್ಸನ್ನು ಅಲ್ಪ ಸ್ವಲ್ಪ ಸಾಧಿಸಿದ ಲೇಖಕರು ಮಾಡಲಾರದೆ ಹೋದರು."[5]

ಈ ಎಲ್ಲ ನೆಲೆ–ನಿಲುವುಗಳನ್ನು ಕಂಡ ಮೇಲೆ ಸಾಮಾನ್ಯವಾಗಿ ಪ್ರಗತಿಶೀಲ ಕಾವ್ಯ ಬೆಳೆದು ಬರಲಿಲ್ಲ ಎಂಬ ಅಭಿಪ್ರಾಯಕ್ಕೆ ಬಂದು ನಿಲ್ಲಬಹುದು. ಆದರೆ ಸಂಶೋಧಕನ ದೃಷ್ಟಿ ಸಾಮಾನ್ಯ ಅಭಿಪ್ರಾಯಕ್ಕೆ ಬದ್ಧವಾಗಿರುವುದಿಲ್ಲ, ಪ್ರಗತಿಶೀಲ ಕಾವ್ಯ ಪ್ರಮಾಣದಲ್ಲಿ ಕಡಿಮೆ ಇದ್ದರೂ ಕೂಡಾ ಪ್ರಗತಿಪರ ವಿಚಾರಧಾರೆಯನ್ನು ತುಂಬಿಕೊಂಡು ಮಾನವತಾವಾದದ ಪ್ರತಿಪಾದನೆಯಲ್ಲಿ ತೊಡಗಿರುವುದು ತುಂಬ ಗಮನಾರ್ಹ ಸಂಗತಿ. ಗೋಪಾಲಕೃಷ್ಣ ಅಡಿಗ, ಬಿ. ಸಿ. ರಾಮಚಂದ್ರ ಶರ್ಮಾ, ಸು.ರಂ. ಯಕ್ಕುಂಡಿ, ಗಂಗಾಧರ ಚಿತ್ತಾಲ, ಬಿ. ಸೀತಾರಾಮಯ್ಯ, ಬಸವರಾಜ ಕಟ್ಟಿಮನಿ ಮೊದಲಾದವರು ಪ್ರಗತಿಶೀಲ ಪಂಥದಲ್ಲಿದ್ದಾಗ ರಚಿಸಿದ ಕಾವ್ಯಗಳು ಸಾಮಾಜಿಕ ಅಸಮಾನತೆಯನ್ನು ಪ್ರತಿಭಟಿಸಿ ಮಾನವತಾವಾದದತ್ತ ಮುಖ ಮಾಡಿರುವುದು ಕಂಡುಬರುತ್ತದೆ.

"ಹೊಟ್ಟೆಯಲಿ ಹುಟ್ಟಿದೀ ಬೆಂಕಿ ವಿಲಯಾಗ್ನಿ ಸಮ
ಏರುತಿದೆ ಎದೆಗೆ, ಮನುಜತೆಯ ಚಿತೆಗೆ......
ಸುಟ್ಟೀತು ಮನಕುಲವೆ ಇದರ ಹರಗೆ ?"[6]

ಹಸಿವಿನ ಪರಿಣಾಮವನ್ನು ಚಿತ್ರಿಸುವ ಕವಿಗೆ ಬಡವರ ಈ ಹಸಿವಿನ ಬೆಂಕಿ ಇಡೀ ಮನುಕುಲವನ್ನೇ ನಾಶಮಾಡಬಲ್ಲದು. ಅಂತಹ ಶಕ್ತಿ ಅದಕ್ಕಿದೆ ಎಂದು ಹೇಳುತ್ತಲೇ,

"ನಿನ್ನ ನಂದನ ಬೂದಿಯಾಗದಂತೆ
ನನ್ನದನು ಕೊಡು ನಾನು ತಣಿಯುವಂತೆ
ನಾನು ಪಶು, ಶುದ್ಧ ಪಶು ! ಹೊಟ್ಟೆ ತುಂಬಲಿ; ಬಳಿಕ
ನಿನ್ನ ಕನಸಿನ ನೂಲು ದಾರಿಯಲ್ಲಿ;
ಏರೇರು ನಾ ಮುಗಿಲಿನೇಣಿಯಲ್ಲಿ ?"[7]

ಯಾವುದೇ ಸಮಾಜದಲ್ಲಿ ವೈಯಕ್ತಿಕ ಅಥವಾ ಸಾಮೂದಾಯಿಕ ಸಂಘಟನೆ ಮತ್ತು ಅದರ ಮೂಲಕ ನಡೆಸುವ ಚಳುವಳಿಗಳು ಮಹತ್ವ ಪಡೆಯುತ್ತವೆ. ಆದರೆ ಅದೇ ಸಂದರ್ಭದಲ್ಲಿ ಒಬ್ಬ ಮನುಷ್ಯನ ವೈಯಕ್ತಿಕ ಮೂಲಭೂತ ಬೇಡಿಕೆಗಳನ್ನು ಲಕ್ಷಿಸಬೇಕಾಗುತ್ತದೆ. ಹೋರಾಟದ ಕಿಚ್ಚಿನಲ್ಲಿ ಬದ್ಧ ಧೋರಣೆಯೊಂದನ್ನು ಮುಂದಿಟ್ಟುಕೊಂಡು ಮಾತನಾಡುವುದು ಸುಲಭ. ಆದರೆ ಮೂಲಭೂತ ಬೇಡಿಕೆಗಳಾದ ಅನ್ನ, ಅರಿವೆ, ವಸತಿ ಮೊದಲಾದವುಗಳ ಅಭಾವವಿರುವಲ್ಲಿ ಇಂಥ ಮಾತುಗಳು ಕ್ಷಣಿಕ ತೃಪ್ತಿಯನ್ನು ಮಾತ್ರ ನೀಡಬಲ್ಲವು. ಹೊರತಾಗಿ ಇಡೀ ಜೀವನವನ್ನು ಅಥವಾ ಬದುಕನ್ನು ತತ್‌ಕ್ಷಣದಲ್ಲಿ ನಿರ್ಮಿಸಲಾರವು. ಹಾಗಾಗಿ ಇಂಥ ಮಾತುಗಳು ಕೇವಲ ಬೂಟಾಟಿಕೆ ಎನಿಸುತ್ತವೆ. ಅದಕ್ಕಾಗಿಯೇ ಅಡಿಗರು ಇಡೀ ಬಡತನವನ್ನೇ ನಿರ್ಮೂಲನೆ ಮಾಡುವ ಹೊಣೆ ಹೊತ್ತಂತೆ. ಚಳುವಳಿಗೆ ನಾಯಕನೊಬ್ಬ ಕರೆ ನೀಡಿದಾಗ ಮೊದಲು ಹಸುವಿನಿಂದ ತಳಮಳಿಸುವ ಹೊಟ್ಟೆಗೆ ಅನ್ನ ನೀಡು, ಮಾನ ಮುಚ್ಚಿಕೊಳ್ಳಲು ಬಟ್ಟೆ ಕೊಡು ತಲೆಯ ಮೇಲೊಂದು ಸೂರು ಕೊಡು. ಇವುಗಳನ್ನು ಕೊಟ್ಟಾದ ಮೇಲೆ 'ಬಂದೇನು ನಾನೂನು ನಿನ್ನ ಕೂಡಾ' ಎಂದು ಮೊರೆಯಿಡುತ್ತಾನೆ; ಎಂಬುದನ್ನು ಬಹು ಮಾರ್ಮಿಕವಾಗಿ ಹೇಳಿದ್ದಾರೆ. "ಸತ್ಯದ ಪ್ರತಿಫಲನವೆಂದರೆ ಅದು ಕೇವಲ ನಕಲು ಮಾಡುವುದೆಂದಲ್ಲ ಸತ್ಯ ಸಂಗತಿಯನ್ನು ನಕಲು ಮಾಡುವಷ್ಟರಲ್ಲೇ ಕಲಾವಿದ ತೃಪ್ತನಾಗತಕ್ಕದ್ದಲ್ಲ. ಈ ಸಂಗತಿಗಳನ್ನು ಅರ್ಥೈಸಿಕೊಂಡು ಬೆಲೆ ಕಟ್ಟಿವ ಹವಣಿಕೆ ಅವನದಾಗಬೇಕು. ಕನ್ನಡಿಯಲ್ಲಿಟ್ಟು ಪ್ರತಿಬಿಂಬಿಸುವಂತೆ ಬದುಕನ್ನು ಉದಾಸೀನತೆಯಿಂದ ಚಿತ್ರಿಸುವುದು ಕಲೆಯೆನಿಸಲಾರದು. ಅದರಲ್ಲಿ ಕಲಾವಿದನ ಜೀವಂತ ಅರ್ಥಪೂರ್ಣ ಚಿಂತನೆಯಿರಬೇಕು. ಜನಜೀವನದ ಕಲ್ಯಾಣದ ಆಶಯ ಮಿಡಿಯುತ್ತಿರಬೇಕು."[8]

ಅಂದರೆ ಬರೀ ಹೇಳಿಕೆಗಳೆ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಿ ಸಾಮಾಜಿಕ ಪರಿವರ್ತನೆಯನ್ನುಂಟು ಮಾಡಲಾರವು ಎಂಬ ವಿಚಾರ ಇಲ್ಲಿದೆ. ಆದರೆ ಅಡಿಗರ ಕಾವ್ಯದೃಷ್ಟಿ ಸಮಸ್ಯೆಯನ್ನು ಕೇವಲ ಸಮಸ್ಯೆಯಾಗಿಯೆ ನೋಡಲು ಇಚ್ಛಿಸುತ್ತದೆ. ಇದು ಸಾಮ್ಯವಾದಿ ಬದ್ಧತೆಗಳನ್ನು ಒಪ್ಪಿಕೊಳ್ಳದ ಸ್ಥಿತಿಯಾಗಿದೆ ಎನ್ನಬಹುದು. ಯಾಕೆಂದರೆ ಸಾಮ್ಯವಾದಿಗಳ ನಿರಂತರ ಹೋರಾಟ ಚಳುವಳಿ ಇವೆಲ್ಲವುಗಳನ್ನು ನಿರಾಕರಿಸುವ ಅವರು ಹೋರಾಟ, ಚಳುವಳಿಗಿಂತ ಮೊದಲು ಸಮಸ್ಯೆಯನ್ನು ತೀವ್ರವಾಗಿ ಶಮನಗೊಳಿಸುವ ನೆಲೆಯಲ್ಲಿ ಮಾತನಾಡುತ್ತಾರೆ. ಇಲ್ಲಿ ಅಭಿಪ್ರಾಯ ಭೇದ ಇದ್ದರೂ ಕೂಡ ಅಂತಿಮ ಗುರಿ ಒಂದೆ, ಅದು ಮಾನವತಾವಾದ.

ಯಕ್ಕುಂಡಿಯವರ ಕೆಲವು ಕವನಗಳು ಮಾನವತಾವಾದದಿಂದ ಕೂಡಿವೆ. ಅವರ 'ಹಿಟ್ಟು ಮತ್ತು ಮಲ್ಲಿಗೆ; 'ರೊಟ್ಟಿ ಮತ್ತು ಕೋವಿ', 'ಬಕುಲದ ಹೂವುಗಳು', 'ಬೆಸ್ತ ಮತ್ತು ನಾಯಿ' ಮೊದಲಾದ ಕವಿತೆಗಳು ವೈಚಾರಿಕ ದೃಷ್ಟಿಯನ್ನಿಟ್ಟುಕೊಂಡು ಬರೆದಂತಹ ಕವನಗಳು. ಹಾಗೆಯೇ 'ಅಕ್ಕ ತಂಗಿಯರ ಕಥೆ', 'ಪ್ರವಾದಿಯ ನಿಲುವಂಗಿ', 'ಇಬ್ಬರು ರೈತರು', 'ಅಶ್ವತ್ಥಾಮ' ಮೊದಲಾದ ಕವಿತೆಗಳು ವಸ್ತುವಿನ ದೃಷ್ಟಿಯಿಂದ ಭಿನ್ನವೆನಿಸಿದರೂ ಆಶಯ ಸಮಾಜಪರವಾದದ್ದು.

ಪ್ರಗತಿಶೀಲ ಪಂಥದ 'ಸರ್ವರಿಗೂ ಸಮಪಾಲು; ಸರ್ವರಿಗೂ ಸಮಬಾಳು' ಎಂಬ ಧ್ಯೇಯವಾಕ್ಯ ಇಲ್ಲಿ ಮೂಡಿ ಬಂದಿದೆ. ಶಾಂತಿ, ಸಮಾನತೆಯನ್ನು ಬಿತ್ತರಿಸಲು ಹೋದ ಜನ ಅದು ಫಲಿಸದೇ ಹೋದಾಗ ಅದನ್ನು ಹಿಂಸೆಯಿಂದಾದರೂ ಸ್ಥಾಪಿಸಬೇಕೆಂಬ ನೆಲೆಗೆ ಬಂದು ತಲುಪುತ್ತಾರೆ. ಆದರೂ ಇಲ್ಲಿ ಸ್ವಲ್ಪ ಗೊಂದಲ ಕಾಣಿಸಿಕೊಂಡಿದೆ. ಪಾಶ್ಚಾತ್ಯ ದೃಷ್ಟಿಯ ಹಿನ್ನಲೆಯಲ್ಲಿ ಇದು ಸುಲಭ ಸಾಧ್ಯವಾದ ಭಾರತೀಯ ದೃಷ್ಟಿಯಲ್ಲಿ ಇದು ಕಷ್ಟಸಾಧ್ಯವೇ ಆಗಿದೆ. ಸಾಮ್ಯವಾದಿ ಹಿನ್ನಲೆಯಲ್ಲಿ ಇಂಥ ಪ್ರಕ್ರಿಯೆಗಳು ಪ್ರಸ್ತುತ ಸಂದರ್ಭದಲ್ಲಿ ಅಲ್ಲಲ್ಲಿ ನಡೆದರೂ ಕೂಡಾ ಅದನ್ನು ಧಿಕ್ಕರಿಸುವ ಜನ ಅಧಿಕವಾಗಿರುವ ಈ ದೇಶದಲ್ಲಿ ಅಂಥ ಗೊಂದಲಗಳು ಸಹಜ ಕೂಡ.

ಸಾಮಾಜಿಕ ಅಸಮಾನತೆಯನ್ನು ತೊಡೆದುಹಾಕಿ ಸಮಾನತೆ ನೆಲೆಯ ಹಂಬಲದಲ್ಲಿರುವವರಿಗೆ ಉಳಿದಿರುವ ಅಸ್ತ್ರಗಳು ಎರಡೇ ಎರಡು. ಒಂದು ಇಡೀ ಭೂಮಿಯನ್ನೇ ಹಸಿರಾಗಿಸಿ ಉಸಿರಾಡುವುದು, ಇನ್ನೊಂದು ಇಡೀ ಭೂಮಿಯನ್ನೇ ಬರಡು ಮಾಡುವಂತೆ ಸಿಡಿಮದ್ದು ಸಿಡಿಸುವುದು. ಈ ಎರಡು ಆಯ್ಕೆಗಳಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕೆಂಬ ಗೊಂದಲ ಪ್ರಾಮಾಣಿಕ ಮನುಷ್ಯರ ಮಾನವೀಯತೆಯನ್ನೇ ತೋರಿಸುತ್ತವೆ; ಹೊರತಾಗಿ ಕಳವಳದ ಸ್ಥಿತಿಯೇನಲ್ಲ, ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ವೈದಿಕ ಪರಂಪರೆಯಲ್ಲಿದ್ದ ಭಾರತೀಯ ಸಮಾಜ ಬ್ರಿಟಿಷರ ಆಡಳಿತ ಬಂದಾಗ ಕೆಲವು ಸುಧಾರಣೆಗಳನ್ನು ಕಂಡಿತು. ಆದರೆ ಹೇಳಿಕೊಳ್ಳುವಂಥ ಬದಲಾವಣೆಗಳು ಕಾಣಲಿಲ್ಲ. ಶೋಷಿತರು ಎರಡು ಬಗೆಯ ಶೋಷಣೆಗಳನ್ನು ಅನುಭವಿಸುವಂತಾಯಿತು. ಒಂದು ಧಾರ್ಮಿಕ ಮೂಲದ್ದಾದರೆ ಇನ್ನೊಂದು ಆಡಳಿತ ಮೂಲವಾಗಿತ್ತು. ದೀನ-ದಲಿತ, ದುರ್ಬಲ ರೈತ-ಕಾರ್ಮಿಕ ಮೊದಲಾದ ವರ್ಗಗಳು ನಿತ್ಯ ಹಿಂಸೆಯನ್ನು ಅನುಭವಿಸುವಂತಾಯಿತು. ಬ್ರಿಟಿಷರಿಂದ ಬಿಡುಗಡೆಗೊಂಡರೆ ಪ್ರಜಾಪ್ರಭುತ್ವದ ಆಸರೆಯಲ್ಲಿ ದೇಶದ ಸರ್ವ ಜನರು ಸುಖ-ಸಮೃದ್ಧಿಗಳಿಂದ ಸಮಾನತೆಯಿಂದ ಬದುಕಬಹುದು ಎಂದು ಭಾವಿಸಿದ ಕವಿಗೆ ಭ್ರಮನಿರಸನವಾಗುತ್ತದೆ. ಬಿಳಿಯರ ಕೈಯಿಂದ ಅಧಿಕಾರ ಭಾರತೀಯರಿಗೆ ಹಸ್ತಾಂತರವಾದರೂ ಆ ಅಧಿಕಾರ ಪಡೆದವರೂ ಕೂಡ ಪಟ್ಟಭದ್ರ ಹಿತಾಸಕ್ತಿಗಳಾಗಿ ಸಾಮಾನ್ಯ ಜನರ ಬದುಕನ್ನು ಹಿಂಡಿ-ಹಿಪ್ಪೆ ಮಾಡಿದರು.

ಬಡತನ ಯಾವೊಂದು ಬದಲಾವಣೆಯನ್ನು ಕಾಣದೇ ಹೆಚ್ಚಾಗುತ್ತಲೇ ನಡೆಯಿತು. ಯಾವೊಂದು ಆಸ್ವಾಸನೆಗಳು ಕಾರ್ಯಗತವಾಗಲಿಲ್ಲ. ಇದರಿಂದ ನೊಂದುಕೊಂಡ ಕವಿ ಆಕ್ರೋಶವನ್ನು ತಾಳುತ್ತಾನೆ. ಎಲ್ಲರನ್ನು ಸಲಹುವ ತಾಯಿಯಾಗಿ ಬರಬೇಕಾಗಿದ್ದ ಸ್ವಾತಂತ್ರ್ಯ ಉಳ್ಳವರ ಮನೆಯ ಸೂಳೆಯಾಗಿ ಬಂದಿತು; ಎನ್ನುವಲ್ಲಿ ನೇರವಾಗಿ ಪ್ರಹಾರಕ್ಕೆ ತೊಡಗುತ್ತಾರೆ. ಈ ಮೋಸವನ್ನು ತೊಡೆದು ಹಾಕಲು ಅಥವಾ ನಾಶ ಮಾಡಲು 'ಸುಡುವೆ ಹೋಳಿಯಾಗಿ' ಎನ್ನುವುದನ್ನು ನೋಡಬೇಕು. ಇಲ್ಲಿ 'ಹೋಳಿ' ಬೆಂಕಿಯ ಸಂಕೇತವಾದರೆ 'ಬೆಂಕಿ' ಕ್ರಾಂತಿಯನ್ನು ಪ್ರತಿನಿಧಿಸುತ್ತದೆ. ಚಿತ್ತಾಲರ ಈ ಮನೋಧರ್ಮ ಪ್ರಗತಿಶೀಲ ಕಾಲದ ಪುರೋಗಾಮಿ ಕಾವ್ಯಕ್ಕೆ ಬದ್ಧವಾಗಿದೆ.

## 2. Conclusion

ಒಟ್ಟಿನಲ್ಲಿ ಪ್ರಗತಿಶೀಲ ಕಾವ್ಯ ಬೆಳವಣಿಗೆಯಲ್ಲಿ ಮಿತಿಯನ್ನು ಕಂಡರೂ ವಾಸ್ತವಾದವನ್ನು ರೂಢಿಸಿಕೊಂಡು ಸಮಾಜಿಕ ಅಸಮಾನತೆಯನ್ನು ತೊಡೆದು ಹಾಕಲು ಕ್ರಾಂತಿಯ ಅಗತ್ಯವನ್ನು ಒತ್ತಿ ಹೇಳುತ್ತದೆ. ಸಾಮಾಜಿಕ ಚಿತ್ರಣವನ್ನು ನೀಡುವಾಗ ಅಥವಾ ಅದನ್ನು ಗುರುತಿಸುವಾಗ ಮಾನವತಾವಾದದ ಪರಿಕಲ್ಪನೆ ಅವರ ಮುಂದಿರುವುದನ್ನು ಕಾಣುತ್ತೇವೆ. ಅಯಾಮಗಳು, ಅಭಿವ್ಯಕ್ತಿಗಳು ಭಿನ್ನವಾಗಿದ್ದರೂ ಮಾನವತಾವಾದದ ತುಡಿತ ಸಮಗ್ರವಾಗಿ ಪ್ರಗತಿಶೀಲ ಕಾವ್ಯದಲ್ಲಿ ಕಾಣಿಸಿಕೊಂಡಿದೆ, ಎಂಬುದರಲ್ಲಿ ಎರಡು ಮಾತಿಲ್ಲ.

**ಅಡಿಟಿಪ್ಪಣಿಗಳು**

1. ಡಾ. ಸಿ.ಆರ್. ಯರವಿನತೆಲಿಮಠ : ಪಾಶ್ಚಾತ್ಯ ಸಾಹಿತ್ಯವಾದಗಳು ಮತ್ತು ಕನ್ನಡ ಸಾಹಿತ್ಯ ಸಂದರ್ಭ, 2000, ಪು. 95.
2. ಡಾ.ಸಿ.ಆರ್.ಯರವಿನತೇಲಿಮಠ :ಪಾಶ್ಚಾತ್ಯ ಸಾಹಿತ್ಯವಾದಗಳು ಮತ್ತು ಕನ್ನಡ ಸಾಹಿತ್ಯ ಸಂದರ್ಭ, 2000, ಪು.92, 93.
3. ಬರಗೂರು ರಾಮಚಂದ್ರಪ್ಪ : ಸಾಹಿತ್ಯ ಮತ್ತು ರಾಜಕಾರಣ, 1998, ಪು. 198.
4. ಜಿ. ಎಸ್. ಶಿವರುದ್ರಪ್ಪ : ಗತಿಬಿಂಬ, 1974, ಪು. 80.
5. ಸಿ. ವೀರಣ್ಣ (ಸಂ) : ಕನ್ನಡ ಪ್ರತಿಭಟನಾ ಕಾವ್ಯ, 1981, ಪು. 36.
6. ಸಿ. ವೀರಣ್ಣ (ಸಂ): ಕನ್ನಡ ಪ್ರತಿಭಟನಾ ಕಾವ್ಯ, 1981, ಪು. 209.
7. ಅದೇ,
8. ಡಿ. ವಿ. ಕೆ. ಮೂರ್ತಿ: ಜೀವನ ಮೌಲ್ಯಗಳು ಮತ್ತು ಸಾಹಿತ್ಯ, 1995, ಪು. 187.